ಶ್ರೀ ಎಸ್.ಎ.ರವೀಂದ್ರನಾಥ್(ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು): ಮಾನ್ಯ ಅಧ್ಯಕ್ಷರೇ ನಾಳೆಯೇ ಶಾಸಕರನ್ನು ಮತ್ತು ಅಧಿಕಾರಿಗಳನ್ನು ಕರೆದು ಅವರ ಜೊತೆ ಕುಳಿತುಕೊಂಡು ಅದನ್ನು ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಆಯಿತು.

(ಎ) ವಿಷಯ: ಗಡಿನಾಡ ಕನ್ನಡಿಗರ ಅಯೋಗದ ಮಧ್ಯಂತರ ವರದಿ ಕುರಿತು ಚಾರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಕರ್ನಾಟಕ ಏಕೀಕರಣ ಮತ್ತು ಸುವರ್ಣ ಕರ್ನಾಟಕ 50 ವರ್ಷ ಎಲ್ಲವೂ ಆಗಿದೆ. ಇದು ಆದ ಮೇಲೆ ಅನೇಕ ಸಮಿತಿಗಳನ್ನು ಗಡಿನಾಡಿನ ಅಭಿವೃದ್ಧಿಗೆ, ಗಡಿನಾಡಿನ ಬೆಳವಣಿಗೆಗಳ ಬಗ್ಗೆ ಅನೇಕ ಸಮಿತಿಗಳು ರಚನೆಯಾದವು. ಅದರಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿತ್ತು. ಮಾನ್ಯ ಎಸ್.ಎಂ. ಕೃಷ್ಣರವರು, ಮುಖ್ಯಮಂತ್ರಿಯಾಗಿದ್ದಾಗ. ನಾನು ಆ ಬಗ್ಗೆ ವರದಿಯನ್ನು ಕೊಟ್ಟು 18,08.2000ದಲ್ಲಿ ಮಧ್ಯಂತರ ವರದಿಯನ್ನು ಕೊಟ್ಟಿದ್ದೇನೆ. ಇವತ್ತಿನವರೆಗೆ ಆ ವರದಿ ಏನಾಯಿತು, ವರದಿಯ ಪರಿಸ್ಥಿತಿ ಏನು? ಇಂತಹ ವರದಿಗಳಿಂದ ಆಯೋಗವನ್ನು ರಚನೆ ಮಾಡಿದಾಗ, ಆಯೋಗವನ್ನು ಮಾಡಿರುವುದಕ್ಕಾದರೂ ಬೆಲೆ ಇರಬೇಕು. ಕೊಟ್ಟ ವರದಿಯ ಬಗ್ಗೆಯಾದರೂ ಬೆಲೆ ಇರಬೇಕು. ಇದರ ಬಗ್ಗೆ ಸರ್ಕಾರ ಏನಾದರೂ ಸಹ ಹೇಳಬೇಕು. ವರದಿಯನ್ನು ತಿರಸ್ಕರಿಸಿದ್ದೇನೆಂದಾದರೂ ಕೂಡ ಹೇಳಬೇಕು. ಇಲ್ಲಾ ವರದಿಯನ್ನು ಒಪ್ಪಿದ್ದೇನೆಂದಾದರೂ ಸಹ ಹೇಳಬೇಕು. ಅಥವಾ ಭಾಗಶಃ ಒಪ್ಪಿದ್ದೇನೆಂದು ಸಹ ಹೇಳಬೇಕಾಗಿತ್ತು. ಗಡಿನಾಡಿನ ಪರಿಸ್ಥಿತಿ ನರಕವಾಗಿದೆ, ಹೊರನಾಡಿನ ಪರಿಸ್ಥಿತಿ ನರಕವಾಗಿದೆ, ಅನೇಕ ಗಡಿನಾಡಿನ ಹಳ್ಳಿಗಳು ಸಾವಿರಾರು ಹಳ್ಳಿಗಳು ಬೇರೆ ರಾಜ್ಯಕ್ಕೆ ಹೋಗುತ್ತೇವೆನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕರ್ನಾಟಕ ಸರ್ಕಾರಕ್ಕೆ ಗಡಿನಾಡಿನ ಬಗ್ಗೆ ಒಂದು ನೀತಿ ಇಲ್ಲವಾಗಿದೆ. ಗಡಿನಾಡಿನ ಕನ್ನಡಿಗರ ಬಗ್ಗೆ ಒಂದು ನೀತಿ ಇಲ್ಲ, ಹೊರನಾಡಿನ ಬಗ್ಗೆ ಒಂದು ನೀತಿ ಇಲ್ಲ. ಈ ರೀತಿಯಾಗಿ ನಾವು ಕೊಟ್ಟಂತಹ ವರದಿಗಳು ಏನಾಗಿದೆ, ಆ ವರದಿಗಳು ಎಲ್ಲಿಗೆ ಬಂದಿದೆ, ಸರೋಜಿನಿ ಮಹಿಷಿ ವರದಿಯಂತೂ ಕಸದ ತೊಟ್ಟಿಗೆ ಹೋಯಿತು, ಇವತ್ತಿನವರೆವಿಗೂ ಕೂಡ ಏನೂ ಆಗಿರುವುದಿಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಎಷ್ಟು ವರದಿಗಳು, ಸಮಿತಿಯ ವರದಿಗಳು ಏನಾಯಿತು, ನೇಮಕ

ಮಾಡಿರುವಂತಹ ವರದಿಗಳು ಏನಾಯಿತು. ಅನೇಕ ವರದಿಗಳು ಇಲ್ಲಿ ನಾವೂ ಏನಿದ್ದರೂ ಈ ಮೊಸಳೆ ಕಣ್ಣೀರು ಮತ್ತು ಕಂಠಶೋಷಣೆ ಮಾಡಿಕೊಳ್ಳುತ್ತಿದ್ದೇವೆಯೇ ಹೊರತು ವರದಿಗಳ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ತೀರ್ಮಾನವನ್ನು ಕೈಗೊಂಡಿರುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಹೇಳಬೇಕು. ನಾನು ಈ ವರದಿಯನ್ನು ಕೊಟ್ಟು 7 ವರ್ಷಗಳಾಯಿತು. ಏನಾದರೂ ಒಂದು ಕಡೆ ಇದರ ಬಗ್ಗೆ ಚಿಂತನೆಯನ್ನು ಮಾಡಿದ್ದೀರಾ? ಇದನ್ನು ಓದಿದ್ದೀರಾ? ಇದಕ್ಕೆ ಸಮಿತಿಯನ್ನು ಮಾಡಿದ್ದೀರಾ? ಇದರ ಬಗ್ಗೆ ತಾವು ಯೋಚನೆಯನ್ನು ಮಾಡಿದ್ದೀರಾ? ಕರ್ನಾಟಕ ಏಕೀಕರಣ ಏತಕ್ಕೆ ಆಗಬೇಕಾಗಿತ್ತು, ಇದು ಆಗಿರುವಂತಹ ಉದ್ದೇಶವಾದರೂ ಏನು? ಭಾಷವಾರು ಉದ್ದೇಶವಾದರೂ ಏನು? ಗಡಿನಾಡಿನ ಪರಿಸ್ಥಿತಿ ಏನು? ಗಡಿನಾಡು ಸಂಪೂರ್ಣವಾಗಿ ನಮ್ಮ ಕೈಯಲ್ಲಿ ಉಳಿದಿಲ್ಲ. ಅದು ಕನ್ನಡಿಗರ ಕೈಯಲ್ಲಿ ಉಳಿದಿಲ್ಲ. ಕನ್ನಡಭಾಷೆ ಬೆಳವಣಿಗೆಯಾಗಲಿಲ್ಲ. ಕನ್ನಡ ಸಂಸ್ಕೃತಿ ಉಳಿದಿಲ್ಲ. ಹೊರನಾಡು ಕನ್ನಡಿಗರನ್ನು ಕೇಳುವವರು ಗತಿ ಇಲ್ಲ. ಇವೆಲ್ಲವನ್ನು ಸೇರಿಸಿ ನಾನು ವರದಿಯನ್ನು ಕೊಟ್ಟಿದ್ದರೆ ಸರ್ಕಾರ ಇವತ್ತಿನವರೆಗೂ ಕೂಡ ಕನ್ನಡದ ಬಗ್ಗೆ ಇವರಿಗೆ ಏನೂ ಬೇಕಾಗಿಲ್ಲ. ರಾಜಕೀಯ ಮಾಡುತ್ತಾರೆ. ಬೇರೆ ವಿಚಾರಗಳನ್ನು ಮಾತನಾಡುತ್ತಾರೆ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತಾರೆಂದು ಕೇಳುತ್ತಿದ್ದೇನೆ ಇದರ ಬಗ್ಗೆ ಯಾರು ಹೇಳುತ್ತಾರೆ. ಯಡಿಯೂರಪ್ಪನವರು ಹೇಳತ್ತಾರೆಯೇ, ಗೃಹಮಂತ್ರಿಗಳು ಹೇಳುತ್ತಾರೆಯೇ, ಇದಕ್ಕೆ ಯಾರು ಧಾತರು, ಇದರ ಬಗ್ಗೆ ಹೇಳಲಿ. ಇದರ ಬಗ್ಗೆ ಅಮೇಲೆ ತರಿಸಿಕೊಂಡು ಹೇಳುತ್ತೇನೆಂಬ ಪ್ರಶ್ನೆ ಬೇಡ. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಹೇಳಲಿ. ಗೃಹ ಮಂತ್ರಿಗಳು ಹೇಳಲಿ. ಅವರು ಗಡಿನಾಡಿನ ಬಗ್ಗೆ ಅಧ್ಯಯನವನ್ನು ಮಾಡಿದ್ದಾರೆ, ಅವರಿಗೆ ಚಿಂತನೆ ಇದೆ. ಇದರ ಬಗ್ಗೆ ಅವರು ಹೇಳಬೇಕು.

ಅಧ್ಯಕ್ಷರು: ಅಲ್ಲಿ ಏನಪ್ಪಾ ಮಂತ್ರಿಗಳ ಹತ್ತಿರ ಗುಂಪು? ಏನು ನೋಡುವುದು ಹೇಳಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಇಲ್ಲ, ತಾವು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: Government dryland ಭೂಮಿಯಲ್ಲಿ ಇವು ಓಡಾಡುತ್ತವೆಯಲ್ಲಾ ಗೂಳಿ ಎತ್ತುಗಳು, ಹಾಗೇ ತಾವು ಅವರಿಗೆ ಸ್ವಲ್ಪ ಹೇಳಿ.

ಅಧ್ಯಕ್ಷರು:ಮಾನ್ಯ ಪ್ರಕಾಶ್‌ರವರು, ಸಂಬಂಧಪಟ್ಟ ಸಚಿವರು ಇಲ್ಲ. ತಾವು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್(ಗೃಹಸಚಿವರು):ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಾಟಾಳ್ ನಾಗರಾಜ್‌ರವರು ತಿಳಿಸಿದಂತೆ ಗಡಿನಾಡಿನಲ್ಲಿರತಕ್ಕಂತಹ ಗಡಿನಾಡಿನ ಭಾಗದ ಕನ್ನಡಿಗರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಕನ್ನಡಿಗರು ತೋರಿಸಿದಷ್ಟು ವಿಶಾಲ ಮನೋಭಾವವನ್ನು ನಮ್ಮ ನೆರೆ ರಾಜ್ಯಗಳು ತೋರಿಸುತ್ತಿಲ್ಲ. ಸಂವಿಧಾನದಲ್ಲಿ ಮತ್ತು ಭಾಷಾವಾರು ಪ್ರಾಂತ್ಯಗಳ ಪುನರ್ ವಿಂಗಡಣೆಯಾದಂತಹ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಭಾಷೆಗಳಿಗೆ ಕೊಡಬೇಕಾದಂತಹ ಪ್ರೋತ್ಸಾಹ ಮತ್ತು ಭಾಷಾನೀತಿಯ ಬಗ್ಗೆ ಅಲ್ಲಿ ನಿರ್ದೇಶನಾಲಯಗಳು ಇವೆ. ಅವು ಉದಾರಣೆಗೆ ಹೇಳುವುದಾಗಿದ್ದರೆ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಅಂಧ್ರಪ್ರದೇಶದಲ್ಲಿರುವಂತಹ ಗಡಿನಾಡಿನ ನಮ್ಮ ಕನ್ನಡದ ಶಾಲೆಗಳು ಈಗ ಪಠ್ಯಪುಸ್ತಕಗಳು ಇಲ್ಲದೆ ಅವು ಸಂಪೂರ್ಣವಾಗಿ ಅಲ್ಲಿ ಪಾಠಪ್ರವಚನಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕನ್ನಡದ ಪಠ್ಯಪುಸ್ತಕಗಳ ಬಗ್ಗೆ ಬಹಳ ವರ್ಷಗಳ ಕಾಲ ಪತ್ರವ್ಯವಹಾರವನ್ನು ಮಾಡಿದ ಮೇಲೆ ನೀವು ಕನ್ನಡದ ಪಠ್ಯಪುಸ್ತಕಗಳನ್ನು ಅಲ್ಲಿ ಕೊಡಬಹುದು, ಅದನ್ನು ನಾವು ಒಪ್ಪುತ್ತೇವೆಂದು ಹೇಳುತ್ತಾರೆ. ನಮ್ಮಲ್ಲಿರುವಂತಹ ಪಠ್ಯಪುಸ್ತಕಗಳನ್ನು ನಾವು ಅವರಿಗೆ ಕೊಟ್ಟಾಗ ಆ ಪಠ್ಯಪುಸ್ತಕಗಳಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಅಥವಾ ಅಲ್ಲಿಯ ವಿಚಾರಗಳ ಬಗ್ಗೆ ಇತಿಹಾಸದ ಬಗ್ಗೆ ಪ್ರಸ್ತಾಪಿಸಲ್ಪಡುತ್ತದೆ. ಆದರೆ ಮುಂದೆ ಅಧ್ರಪ್ರದೇಶದಲ್ಲಿರುವಂತಹ ವಿಚಾರಗಳು ಅದರಲ್ಲಿ ಇರುವುದೇ ಇಲ್ಲ. ಆ ಕಾರಣಕ್ಕಾಗಿ ವಿದ್ಯಾರ್ಥಿಗಳು ಬಹಳ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆ ಮಾಹಿತಿಗಳು ಇಲ್ಲದೇ ಸೊರುಗುತ್ತಿರುವುದು ಕಂಡಿದ್ದೇವೆ. ಇತ್ತೀಚಿನ ದಿನಮಾನಗಳಲ್ಲಿ ಕೂಡ ಅಲ್ಲಿಯ ಹೊರನಾಡ ಕನ್ನಡಿಗರ ಬಗ್ಗೆ ನಾನು ಆಯುಕ್ತರಿಗೆ ಮಾತನಾಡಿದ ಮೇಲೆ ಅವರು ಆ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿದರು. ಅದರಲ್ಲಿ ತಂದೆತಾಯಿಗಳಾಗಿದ್ದವರು ಕನ್ನಡಿಗರು ಮಾತೃಭಾಷೆಯಾಗಿರಬೇಕು, ವಲಸೆ ಹೋದವರದ್ದು ಆ ಪ್ರಶ್ನೆ ಉದ್ಭವವಾಗುವುದಿಲ್ಲ ಎನ್ನುವಂತಹ ರೀತಿಯಲ್ಲಿ ಕೂಡ ಒಂದು ಸುತ್ತೋಲೆ ಹೋಗಿದೆ. ಈ ತರಹ ಅಲ್ಲಿ ವಲಸೆ ಹೋಗಿ ಹೈದರಾಬಾದ್ ಅಥವಾ ಮತ್ತೊಂದು ಕಡೆಗೆ ಇದ್ದಂತಹ ಜನರು ಅವರ ಮಾತೃಭಾಷೆ ಕಡ್ಡಾಯವಾಗಿ ಕನ್ನಡವಾಗಿರುವಾಗಿರಬೇಕೆಂದರೆ ಅಲ್ಲಿಯೇ ಸ್ಥಳೀಯರನ್ನು ಮದುವೆಯಾಗಿರುವವರು ಇರುತ್ತಾರೆ. ಈ ಎಲ್ಲಾ ಸಮಸ್ಯೆಗಳು ಬಂತು, ಆಯುಕ್ತರು ಅದನ್ನು ಸರಿಪಡಿಸಿ ಅವರಿಗೆ ಹೊರನಾಡು

ಕನ್ನಡಿಗರು ಇಲ್ಲಿಯ ಪ್ರವೇಶ ವಿಚಾರಗಳಿಗೆ ಸಂಬಂಧಪಟ್ಟಂತಹವುಗಳನ್ನು ಮಾಡಿದರು. ಹಿಂದೆ ವೀರೇಂದ್ರಪಾಟೀಲ್‌ರವರ ಸರ್ಕಾರದಲ್ಲಿ ರಾಜಶೇಖರ ಮೂರ್ತಿಯವರು ಇದ್ದಾಗ ಗಡಿನಾಡಿನ ಅಭಿವೃದ್ಧಿಗಾಗಿ 25 ಲಕ್ಷ ರೂಪಾಯಿಗಳನ್ನು ಪ್ರತಿ ತಾಲ್ಲೂಕಿಗೆ ಕೊಡುವಂತಹುದ್ದು ಇತ್ತು. ಆಗ 25 ಲಕ್ಷ ರೂಪಾಯಿಗಳನ್ನು ಆ ತಾಲ್ಲೂಕು ಅಭಿವೃದ್ಧಿಗಾಗಿ ಉಪಯೋಗಿಸುತ್ತಿದ್ದರು. ಇತ್ತೀಚಿನ ದಿನಮಾನಗಳಲ್ಲಿ 52 ತಾಲ್ಲೂಕುಗಳನ್ನು ನಾವು ಈ ರೀತಿಯಾಗಿ ಗುರುತ್ತಿಸಿದ್ದೇವೆ. ಆ 52 ತಾಲ್ಲೂಕುಗಳಿಗೂ ಕೂಡ ಪ್ರತ್ಯೇಕವಾದಂತಹ ಹಣದ ವ್ಯವಸ್ಥೆಯನ್ನು ಮಾಡಿ ಗಡಿನಾಡಿನ ಆ ಸಂಚಾರಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿಯನ್ನು ಸಾಧಿಸಬೇಕೆಂಬುದನ್ನು ಮಾಡಿದ್ದೇವೆ. ಮಹಾರಾಷ್ಟ್ರದಲ್ಲಿ ನಾವು ಮರಾಠಿ ಭಾಷೆಯನ್ನು ಕಡ್ಡಾಯವಾಗಿ ಆ ಶಾಲೆಗಳನ್ನು ಮಾಡಿದ್ದೇವೆ. ಮಾಧ್ಯಮವನ್ನು ಸಹ ಮಾಡಿದ್ದೇವೆ. ಆದರೆ ಅಲ್ಲಿ ಕನ್ನಡ ಶಾಲೆಗಳಿಗೆ ಮಹಾರಾಷ್ಟ್ರದವರು ಪ್ರೋತ್ಸಾಹ ಕೊಡದೇ ಇರುವುದರಿಂದ ನಮ್ಮಲ್ಲಿ ಸೊಲ್ಲಾಪುರ, ಜಸ್ಸಾ, ಗಡಹಿಂಗಸಲಾ ಮೊದಲಾದಂತಹ ಪ್ರದೇಶಗಳು ಈ ಅಂಧ್ರಪ್ರದೇಶದ ಮಡಗಸಿರಾ, ಹೊಸೂರು ಮೊದಲಾದಂತಹ ಪ್ರದೇಶಗಳ ಆದವಾನಿ, ಆಲೂರು, ರಾಯದುರ್ಗ, ಮೊದಲಾದ ಪ್ರದೇಶಗಳಲ್ಲಿ, ಕಾಸರಗೋಡಿನ ಪ್ರದೇಶಗಳಲ್ಲಿ ಕನ್ನಡ ಶಾಲೆಗಳು ಮುಚ್ಚುವಂತಹ ಸ್ಥಿತಿಗೆ ಬಂದಿದೆ. ಆ ಕಾರಣಕ್ಕಾಗಿಯೇ ಹಿಂದಿನ ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರು ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅವರು ಈ ಬಗ್ಗೆ ವ್ಯಾಪಕವಾಗಿ ಪ್ರವಾಸವನ್ನು ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ . ಅದೇ ರೀತಿಯಾಗಿ ಬೇರೆ ಬೇರೆ ವರದಿಗಳು ಕೂಡ ಇವೆ. ಸರೋಜಿನಿ ಮಹಿಷಿಯವರ ವರದಿಯ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಇದು ಒಪ್ಪುವಂತಹ ನಮ್ಮ ನೀತಿಯಾಗಿದೆ. ಶೇಕಡಾ 80ರಷ್ಟು ಉದ್ಯೋಗವನ್ನು ನಮ್ಮ ಕನ್ನಡಿಗರಿಗೆ ಕೊಡಬೇಕೆಂದು ಹೇಳಿ, ಅದನ್ನು ಕೆಲವು ಸಂಸ್ಥೆಗಳು ಪರಿಪಾಲಿಸುತ್ತಿಲ್ಲವೆಂದು ಅನೇಕ ಸಲ ಟೀಕೆ ಟಿಪ್ಪಣಿಗಳು ಕೂಡ ಆಗಿದೆ. ಪ್ರತಿ 3 ತಿಂಗಳಿಗೊಮ್ಮೆ ಆ ಕಾರ್ಖಾನೆಯವರು ಎಷ್ಟು ಜನ ಕನ್ನಡಿಗರಿಗೆ ನಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ ಎಂದು ಹೇಳಿ ಅಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಕೊಡಿಸಬೇಕೆಂದು ಇದೆ. ಆದರೆ ಅವರು ಕಳುಹಿಸಿಕೊಡುವುದು ಹೇಗಿರುತ್ತದೆ ಎಂದರೆ, ಮಲೆಯಾಳಿ ಹೆಸರು ಇರುತ್ತದೆ. ತಮಿಳಿನ ಹೆಸರು ಇರುತ್ತದೆ, ಆದರೆ ಅವರು ಇಲ್ಲಿಯೇ ಇರುತ್ತಾರೆ. ಅವರು employment ಇದರೊಳಗಡೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನಮೂದಿಸಿದ್ದಾರೆ.

ಅವರು ಇದೇ ಕರ್ನಾಟಕದಲ್ಲಿ ಕಳೆದ 10 ವರ್ಷಗಳಿಂದ ವಾಸವಾಗಿದ್ದಾರೆಂದು ಮಾತುಗಳನ್ನು ಹೇಳಿ, ಅವರು ಕೂಡ ಕನ್ನಡಿಗರು ಎಂದು ಹೇಳಿ ಪ್ರಾಸ್ತಾಪವನ್ನು ಮಾಡತ್ತಾರೆ. ಯಾವ್ಯಾವುದೋ ಕಾರಣಗಳಿಗಾಗಿ ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ಅನ್ಯ ಭಾಷಿಕರು ಬಹಳ ಮುಖ್ಯವಾಗಿರುವಂತಹ ಸ್ಥಾನದಲ್ಲಿ ಅವರು ಇದ್ದಾರೆ. ಅವರು ಅಲ್ಲಿರುವುದರ ಮೂಲಕವಾಗಿ ಅವರ ಭಾಷೆಯನ್ನು ಮಾತನಾಡತಕ್ಕಂತಹ ಜನಗಳಿಗೆ ಅವರು ಪ್ರೋತ್ಸಾಹವನ್ನು ಕೊಡುತ್ತಾರೆಯೇ ವಿನಃ ಅವರು ಕನ್ನಡಿಗರಿಗೆ ಕೊಡುವುದಿಲ್ಲ. ತಾವು ಇದೇ ಸದನದಲ್ಲಿ ಈ ಬಗ್ಗೆ ಪ್ರತಿಭಟನೆಯನ್ನು ಮಾಡಿದ್ದೀರಿ. ಅನೇಕ ನಮ್ಮ ಸದಸ್ಯರುಗಳು ಕೂಡ ಪ್ರತಿಭಟನೆಯನ್ನು ಮಾಡಿದರು, ನಮ್ಮ ವಿಮಾನ ನಿಲ್ದಾಣದಲ್ಲಿ ಬ್ಯಾಗೇಜುಗಳನ್ನು ತೆಗೆದುಕೊಂಡು ಹೋಗುವಂತಹದ್ದರ ಗುತ್ತಿಗೆಯ ಆಧಾರವನ್ನು ಪಡೆದಿರುವಂತಹ ಒಬ್ಬ ಉತ್ತರಭಾರತದ ಮನುಷ್ಯ ಅಲ್ಲಿ ಇರುವಂತಹ ಎಲ್ಲಾ ಕನ್ನಡಿಗರನ್ನು ನೌಕರಿಯಿಂದ ತೆಗೆದು ಹಾಕಿರುವುದನ್ನು ಸಹ ನಾವು ಕಂಡಿದ್ದೇವೆ. ಇವೆಲ್ಲಕ್ಕೂ ಕಾರಣ ನಮ್ಮ ಕನ್ನಡಿಗರ ಉದಾರ ಶಾಂತಿಪ್ರಿಯತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಈಗ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದನ್ನು ಖಂಡಿತವಾಗಿಯೂ ಕೂಡ ನಿಮ್ಮ ವರದಿಯನ್ನು ಮತ್ತು ಬೇರೆ ಬೇರೆ ವರದಿಗಳನ್ನು ಪರಿಶೀಲಿಸಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಮತ್ತು ಇವತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಏನು ಇದೆ. ಅದು ಕಾವಲು ಸಮಿತಿಯೂ ಕೂಡ ಆಗಿತ್ತು. ಅದರ ಬಗ್ಗೆ ಕೂಡ ಡಾ॥ ಸಿದ್ದಲಿಂಗಯ್ಯನವರು ಈಗ ಅನೇಕ ಸುತೋಲೆಗಳನ್ನು ಸಹ ಹೊರಡಿಸಿ ನರ್ದೇಶನವನ್ನು ಸಹ ಕಳುಹಿಸಿದ್ದಾರೆ. ಅದಕ್ಕೆ ಬೇಕಾಗಿರುವಂತಹ ಎಲ್ಲಾ ಅಧಿಕಾರಿಗಳನ್ನು ಕೂಡ ನಾವು ಕಾನೂನು ರೀತಿಯಲ್ಲಿ ಕೊಟ್ಟಿದ್ದೇವೆ. ನಾವು ಗಂಭೀರವಾಗಿ ಈ ವಿಷಯವನ್ನು ಕೈಗೆತ್ತಿಕೊಂಡು ನಮ್ಮ ವರದಿಯನ್ನು ಯಾವುದು ಸ್ವೀಕೃತವಾದ ಭಾಗಗಳು ಅವುಗಳನ್ನು ನಾವು ಅನುಷ್ಠಾನಗೊಳಿಸುವುದಕ್ಕೆ ಎಲ್ಲಾ ತರಹದ ಪ್ರಯತ್ನಗಳನ್ನು ಸಹ ಮಾಡುತ್ತೇವೆ.

ಅಧ್ಯಕ್ಷರು: ನಾನು ಸರ್ಕಾರಕ್ಕೆ ಒಂದು ಸೂಚನೆ ಹಾಗೂ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಸದನ ಸಮಿತಿಗಳು ಇವೆ. ಆ ಸದನ ಸಮಿತಿಗಳು ತನ್ನ ವರದಿಯನ್ನು ಕೊಡುತ್ತದೆ. ಅದೇ ರೀತಿಯಲ್ಲಿ ಸರ್ಕಾರ ನೇಮಕ ಮಾಡುವ ಸಮಿತಿಗಳು ಸಹ ವರದಿಯನ್ನು ಕೊಡುತ್ತದೆ. ಅದನ್ನು ನಮ್ಮ ಅಫೀಸಿಗೆ ಕಳುಹಿಸಿಕೊಟ್ಟರೆ ನಾವು ನಮ್ಮ ಎಲ್ಲಾ ಸದಸ್ಯರಿಗೆ ಸರ್ಕಾರ ತೆಗೆದುಕೊಂಡಿರುವಂತಹ ಏನು action ಇದೆ, ಅದರ ಬಗ್ಗೆ ಒಂದು

ವರದಿಯನ್ನು ಕೊಟ್ಟರೆ ,ಅನೇಕ ಸಮಸ್ಯೆಗಳಿಗೆ ಮತ್ತು ಗೊಂದಲಗಳಿಗೆ ಅವಕಾಶವಿರುವುದಿಲ್ಲ. ಅದಕ್ಕಾಗಿ 6 ತಿಂಗಳಿಗೆ ಒಂದು ಸಾರಿ ಸರ್ಕಾರ ನಮ್ಮ ಕಛೇರಿಗೆ ಅದನ್ನು ಕೊಡಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾವು ಸಂಸದೀಯ ವ್ಯವಹಾರ ಇಲಾಖೆಯ ಮೂಲಕವಾಗಿ ಕಳುಹಿಸಿಕೊಡುವುದರ ಜೊತೆಗೆ ಎಲ್ಲಾ ಸದನ ಸಮ್ಮಿತಿಗಳು ತಮ್ಮಿಂದಲೇ ನೇಮಕಾತಿಯಾಗಿರುವುದು, ಅವರು ತಮ್ಮ ವರದಿಯನ್ನು ಮೊದಲು ನಮಗೆ ಅರ್ಪಿಸುತ್ತಾರೆ, ಸರ್ಕಾರಕ್ಕೂ ಅರ್ಪಿಸುತ್ತಾರೆ. ಅದು ತಮ್ಮಲ್ಲಿಗೆ ಬಂದಿದೆ ಎಂಬ ಭಾವನೆ ಇತ್ತು. ಆದರೆ ತಾವು ಹೇಳಿರುವ ಉತ್ತಮ ಸಲಹೆ ಪ್ರಕಾರ ಅದನ್ನು ಮಾಡುತ್ತೇವೆ.

ಅಧ್ಯಕ್ಷರು: Action taken report ತೆಗೆದುಕೊಳ್ಳುವುದಿಲ್ಲ. ವರದಿಗಳನ್ನು ಕೊಡುವುದು ಅಷ್ಟೇ ತಾನೆ. ವರದಿಗಳನ್ನು ಇಲ್ಲಿ ಸಲ್ಲಿಸಿರುತ್ತಾರೆ. Action taken report ಇರುವುದಿಲ್ಲ. ಅದರಲ್ಲಿ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರೆಂದು ಗೊತ್ತಾಗುವುದಿಲ್ಲ. ಅಲ್ಲಿ ಕ್ರಮ ತೆಗೆದುಕೊಂಡಿರುವುದು ಬಹಳ ಮುಖ್ಯವಾಗಿರುತ್ತದೆ. ಅದನ್ನು ತಾವು ತಮಗೆ ತಿಳಿಸಿದರೆ ನಾವು ಎಲ್ಲಾ ಸದಸ್ಯರುಗಳಿಗೂ ಸಹ ಅದರ ಬಗ್ಗೆ ಇಂತಿಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ ಎಂದು ತಿಳಿಸುವುದಕ್ಕೆ ಅನುಕೂಲವಾಗುತ್ತದೆ. ಅದು ಸದನಕ್ಕೆ ಹೆಚ್ಚಿನ ಮಾಹಿತಿಯಾಗಿ ಗೊಂದಲಗಳು ಇರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ತಾವು ಉತ್ತಮ ಸಲಹೆಯನ್ನು ಕೊಟ್ಟಿದ್ದೀರಿ, ಅನುಪಾಲನ ವರದಿಯನ್ನು ಪ್ರತಿ 6 ತಿಂಗಳಿಗೊಮ್ಮೆ ತಮಗೆ ಕಳುಹಿಸಿಕೊಡುವ ಬಗ್ಗೆ ಎಲ್ಲಾ ಇಲಾಖೆಗಳಿಗೆ ಪತ್ರವನ್ನು ಬರೆಯಬೇಕೆಂದು ಹೇಳಿ ಈ ದಿವಸ ನಾವು ಮುಖ್ಯಕಾರ್ಯದರ್ಶಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಅಯಿತಲ್ಲಾ, ಅವರು ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರಲ್ಲಾ, ಈ ತರಹ ಆದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ನಾನು ಇದನ್ನು ಕೊಟ್ಟು 7 ವರ್ಷಗಳು ಅಯಿತು. ಈ ವರದಿಗೆ ಏನು ಬೆಲೆ ಇದೆ, ನನಗೆ ಅವರ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ಇವೆಲ್ಲವೂ ಶಾಸನಸಭೆಯಲ್ಲಿ ಕೊಡುವ ಉತ್ತರ ಆಗುತ್ತದೆಯೇ ಹೊರತು ಈ ವರದಿಗೆ ಬೆಲೆ ಇಲ್ಲ. ಇಲ್ಲಿ

ಕೊಟ್ಟಂತಹ ವರದಿಗೆ ಬೆಲೆ ಇಲ್ಲ. ಆದ್ದುದರಿಂದ ಅಮೂಲ್ಯವಾದಂತಹ ನನಗೆ ಬಹಳ ನೋವು ಆಗಿದೆ. ಈ ವರದಿಯನ್ನು ಬಿಸಾಡಬೇಕು, ಇದಕ್ಕೆ ಬೆಲೆ ಇಲ್ಲ, ಈ ವರದಿಗೆ ಬೆಲೆ ಇಲ್ಲ. ಇದಕ್ಕೂ ಕೂಡ ಬೆಲೆ ಇಲ್ಲ. ಇದು ಮಧ್ಯಂತರ ವರದಿಯಾಗಿದ್ದು ನಾನು ಪೂರ್ಣ ವರದಿಯನ್ನು ಸಹ ಕೊಟ್ಟಿರುವುದಿಲ್ಲ. ಮಧ್ಯಂತರ ವರದಿಯನ್ನು ಕೊಟ್ಟರು, ಜಾರಿ ಮಾಡುವುದಕ್ಕಾಗಲಿಲ್ಲ. ಒಂದು ವೇಳೆ ಈ ವರದಿಗೆ ಯಾವುದೇ ಗೌರವವಿಲ್ಲ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಮಧ್ಯಂತರ ಪುಸ್ತಕ ವರದಿಯನ್ನು ಹರಿದು ಹಾಕಿದರು)

ಅಧ್ಯಕ್ಷರು: ಅದನ್ನು ತಾವು ಹರಿದು ಹಾಕಬಾರದು.

ಶ್ರೀ ವಾಟಾಳ್ ನಾಗರಾಜ್: ನಾನು ಕೊಟ್ಟಂತಹ ವರದಿಗೆ ಬೆಲೆ ಇಲ್ಲ.

ಅಧ್ಯಕ್ಷರು: Final Report ಏನಾಯಿತು? ಇದು ಮಧ್ಯಂತರ ವರದಿ.

ಶ್ರೀ ವಾಟಾಳ್ ನಾಗರಾಜ್: ನನ್ನ ವರದಿಗೆ ಬೆಲೆ ಇಲ್ಲ.

ಅಧ್ಯಕ್ಷರು: Final Report ಏನಾಯಿತು ನಮ್ಮದು.

ಶ್ರೀ ವಾಟಾಳ್ ನಾಗರಾಜ್: ಇದನ್ನು ಕೊಡುವುದಕ್ಕಾಗಲಿಲ್ಲ. ನನ್ನನ್ನು ತೆಗೆದುಹಾಕಿದರು. ಅವರು ಬೇಕೆಂದು ರಾಜಕೀಯವಾಗಿ ತೆಗೆದುಹಾಕಿದರು. ಉದ್ದೇಶಪೂರ್ವಕವಾಗಿ ತೆಗೆದುಹಾಕಿದರು. ಇದು ಯಾರಿಗೆ ಬೇಕಾಗಿದೆ ಬಹಳ ನೋವಾಗುತ್ತಿದೆ. ಇದು ಗಡಿನಾಡಿನ ಕಣ್ಣೀರಿನ ಕಥೆಯಾಗಿದೆ. ಇಂತಹ ವರದಿಯನ್ನು ನಾವು ಯಾವ ಉದ್ದೇಶಕ್ಕಾಗಿ ಕೊಟ್ಟೇವು. ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ನಿಜಕ್ಕೂ ನನಗೆ ಬಹಳ ನೋವು ಆಗುತ್ತದೆ. ಈ ವರದಿ ಯಾರಿಗೆ ಬೇಕಾಗಿದೆ, ಯಾವ ಉದ್ದೇಶಕ್ಕಾಗಿ ಈ ವರದಿ? ನನ್ನ ವರದಿಯನ್ನು ನಾನೇ ಹರಿದುಹಾಕುತ್ತೇನೆ. ಇದು ಇತಿಹಾಸಕ್ಕೆ ಹೋಗಲಿ, ಇದು ಚರಿತ್ರೆಗೆ ಹೋಗಲಿ ಇದು ನನಗೇನು ಬೇಕಾಗಿಲ್ಲ. ಏನಾಗಿದೆ, ಇದು ಒಳ್ಳೆಯ ಸೂಚನೆಯಲ್ಲಾ, ನಾನು 40 ವರ್ಷಗಳಿಂದ ಇದಕ್ಕಾಗಿ ಹೋರಾಟವನ್ನು ಮಾಡಿದ್ದೇನೆ. ಕನ್ನಡಕ್ಕಾಗಿ ಈ ರಾಜ್ಯಕ್ಕಾಗಿ, ರಾಜ್ಯದ ಅಭ್ಯುದಯಕ್ಕಾಗಿ ಇವತ್ತು ನರಂತರವಾಗಿ ಕೆಲಸವನ್ನು ಮಾಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ನೀವು ಫೋಟೋವನ್ನು ತೆಗೆದುಕೊಳ್ಳಬೇಡಿ, ಈ ರೀತಿಯಾಗಿ ವಾಕ್‌ಔಟ್ ಮಾಡಿರುವ ಬಗ್ಗೆ ನೀವು ಫೋಟೋಗಳನ್ನು ತೆಗೆದುಕೊಂಡು ಮಾಡಿರುವುದಕ್ಕಾಗಿಯೇ ಅರ್ಧ ವಾಕ್‌ಔಟ್ ಜಾಸ್ತಿಯಾಗಿದೆ. ನಾನು Photographers ಗಳಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ದಯಮಾಡಿ ಯಾರು walk out ಮಾಡುತ್ತಾರೆ, ಅವರ Photo ಗಳನ್ನು ತೆಗೆದುಕೊಳ್ಳಬಾರದು. ಮಾನ್ಯ ದಿನೇಶ್‌ಗುಂಡೂರಾವ್‌ರವರೆ ತಾವು ಹೇಳಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದ ಕೆಳಗಡೆ ಧರಣಿ ಕುಳಿತುಕೊಂಡರು)

ಅಧ್ಯಕ್ಷರು: ಈಗ ದಿನೇಶ್ ಗುಂಡೂರಾವ್ ಮಾತನಾಡಿ.

( ) ವಿಷಯ: ಕೆ.ಪಿಎಸ್.ಸಿ. ಮೂಲಕ ಆಗುತ್ತಿರುವ ನೇಮಕಾತಿಯ ವಿಳಂಬ ಕುರಿತು.

ಶ್ರೀ ದಿನೇಶ್ ಗುಂಡೂರವ್:– KPSC ಮೂಲಕ ಏನು recruitment ಆಗಬೇಕಾಗಿದೆ ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷವೂ ಕೂಡ..

(ಗೊಂದಲ)

ಅಧ್ಯಕ್ಷರು: ಸಂಪ್ರದಾಯ ಕೆಲವೊಂದು ಸಲ ಸದನದ ಮರ್ಯಾದೆಯನ್ನು ಸಹ ಕಾಪಾಡಬೇಕಲ್ಲವೇ?

ಶ್ರೀ ಕೆ.ಶ್ರೀನಿವಾಸಗೌಡ:– ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ನಿಮಿಷ ತಾವು ಕೇಳಬೇಕು. ಇವತ್ತು ವಾಟಾಳ್ ನಾಗರಾಜ್‌ರವರಿಗೆ ಆಗಿರಬಹುದು. ನಾಳೆ ನಮಗೂ ಆಗಬಹುದು. ನೀವು ಈ ರೀತಿಯ ನಿಯಂತ್ರಣವನ್ನು ಮಾಡಿದರೆ..

ಅಧ್ಯಕ್ಷರು: ಹೌದು, No,No, ಈ ರೀತಿ ಇವರು ಮಾಡುವುದನ್ನೆಲ್ಲಾ ಪತ್ರಿಕೆಯವರು ವರದಿ ಮಾಡುತ್ತಾರೆ. ಆದರೆ ಫೋಟೋ ತೆಗೆಸಿಕೊಳ್ಳುವುದು ಸರಿಯಲ್ಲ.

ಶ್ರೀ ಕೆ.ಶ್ರೀನಿವಾಸಗೌಡ:– ದಯವಿಟ್ಟೂ ಪ್ರಜಾಪ್ರಭುತ್ವದಲ್ಲಿ ಇವೆಲ್ಲ ಪ್ರತಿಯೊಂದಕ್ಕೂ ಕೂಡ ಅವಕಾಶಗಳಿವೆ. ಆದರೆ ತಾವು ಒಬ್ಬ dictator ಆಗಿ ವರ್ತಿಸುತ್ತೇವೆಂದರೆ, ವಾಟಾಳ್ ನಾಗರಾಜ್‌ರವರು ಫೋಟೊ ತೆಗೆಸಿಕೊಳ್ಳುವುದು, ಇನ್ನೊಂದು ಅದು ಸಾರ್ವಜನಿಕವಾಗಿ ಪ್ರಚಾರವಾಗಬೇಕಾಗುತ್ತದೆ. ನೀವು ಅದನ್ನು ನಿಯಂತ್ರಿಸುವುದು ಸರಿ ಕಾಣುತ್ತಿಲ್ಲ.